ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 23 ನೇ ಸೆಪ್ಟೆಂಬರ್, 2020

ಅವೈಜ್ಞಾನಿಕ ಟೋಲ್ ಸಂಗ್ರಹಣೆ ಬಗ್ಗೆ

ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು)-

32 (343) ಉಪ ಮುಖ್ಯಮಂತ್ರಿಗಳು ಮತ್ತು ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಪ್ರಸ್ತುತ ಎಷ್ಟು ಸುಂಕ ಪಾವತಿ ರಸ್ತೆಗಳು ಇವೆ; (ಟೋಲ್ ಸ್ಥಾಪಿಸಲಾಗಿರುವ ಆಯಾಯ ರಸ್ತೆ, ಒಂದು ಟೋಲ್‌ನಿಂದ ಇನ್ನೊಂದು ಟೋಲ್ ನಡುವಿನ ಅಂತರ, ಆಯಾಯ ರಸ್ತೆಗಳ ನಿರ್ಮಾಣಕ್ಕೆ ಸದರಿ ಸಂಸ್ಥೆ ವಿನಿಯೋಗಿಸಿದ ಹಣ ಟೋಲ್ ಸಂಗ್ರಹ ಅವಧಿ ಮುಂತಾದವುಗಳ ಪ್ರತ್ಯೇಕವಾದ ಸಂಪೂರ್ಣ ಮಾಹಿತಿ ಒದಗಿಸುವುದು)

(ಆ) ರಾಜ್ಯದಲ್ಲಿ ಟೋಲ್ ಸುಂಕ ಸಂಗ್ರಹಿಸುತ್ತಿರುವ ಸಂಸ್ಥೆಗಳು ಯಾವುವು; (ಸಂಸ್ಥೆವಾರು ನಿರ್ಮಿಸಿರುವ ರಸ್ತೆ, ಟೋಲ್ ಸಂಗ್ರಹದ ಅವಧಿ, ಪ್ರತಿ ಕಿಲೋಮೀಟರ್‌ಗೆ ವಿಧಿಸಲಾಗುತ್ತಿರುವ ಟೋಲ್ ಸುಂಕ, ಇವುಗಳ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)

(ಇ) ಕೆಲವು ಸಂಸ್ಥೆಗಳು ಟೋಲ್ ಸುಂಕ ಸಂಗ್ರಹಿಸುವ ಅವಧಿ ಮುಕ್ತಾಯವಾಗಿದ್ದರೂ, ಅವೈಜ್ಞಾನಿಕವಾಗಿ ಸಾರ್ವಜನಿಕರಿಂದ ಸುಂಕ ಸಂಗ್ರಹಿಸುತ್ತಿರುವುದು ನಿಜವೇ; ಹಾಗಿದ್ದಲ್ಲಿ ಅಂತಹ ಯಾವ ಯಾವ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ? (ಜಿಲ್ಲಾವಾರು ಸಂಪೂರ್ಣ ಮಾಹಿತಿ ಒದಗಿಸುವುದು)